ಶ್ರೀನಿವಾಸನಿಗೂ ಸ್ವಭಾವದಲ್ಲಿ ಬಹಳ ವ್ಯತ್ಯಾಸ. ಎಲ್ಲದರಲ್ಲಿ ಹೊಸತನ ಬೇಕು, ವಾಸುದೇವನಿಗೆ. ಮಾರ್ಕೆಟ್‌ಗೆ ಬರುವ ಹೊಸ ಮಾದರಿಯ ಸೀರೆಯನ್ನು ಮೊದಲು ಗೀತಳೇ ಉಡಬೇಕು. ಒಳ್ಳೆಯ ಸಿನಿಮಾ ಬಂದರೆ ಮೊದಲ ದಿನ ಮೊದಲ ಪ್ರದರ್ಶನದಲ್ಲೇ ನೋಡಬೇಕು. ಅದೆಷ್ಟೇ ಖರ್ಚಾಗಲಿ, ಹಿಂದೆ ಮುಂದೆ ನೋಡುತ್ತಿರಲಿಲ್ಲ ವಾಸುದೇವ. ಶ್ರೀನಿವಾಸನಿಗೆ ತನ್ನ ಜಿಪುಣತನದಿಂದ ಅಪಮಾನವಾಗುತ್ತಲೇ ಇರಲಿಲ್ಲ. 'ಸುಮ್ನೆ ಯಾಕೆ ವೇಸ್ಟ್ ಮಾಡೋದು?' ಪ್ರಶ್ನೆ ಕೇಳಿ ಬೇಸತ್ತಿದ್ದವಳೆಂದರೆ ರೋಹಿಣಿ ಮಾತ್ರ.

ರೋಹಿಣಿಯ ಯೋಚನೆಗಳಿಗೆ ತಡೆ ಹಾಕುತ್ತ ಶ್ರೀನಿವಾಸ ಹೆಜ್ಜೆ ಸದ್ದು ಮಾಡುತ್ತಾ ಬಂದ. ಅವನ ಕೈಲಿದ್ದ ತಟ್ಟೆಯಲ್ಲಿ ಹೆಚ್ಚಿ ಉಳಿದ ಓಟೆಗಳು. 'ಬಾ ರೋಹಿಣಿ. ನಾವಿಬ್ಬರು ಇದನ್ನು ತಿನ್ನೋಣ. ಏನಿಲ್ಲಾಂದ್ರೂ ಐದೈದು ಹಣ್ಣು ತಿಂದಷ್ಟಾಗುತ್ತೆ'

ರೋಹಿಣಿ ಸಿಟ್ಟಿನಿಂದ ಗಂಡನನ್ನೇ ದಿಟ್ಟಿಸಿ ಅಂದಳು:

'ನಂಗೇನೂ ಬೇಕಿಲ್ಲ. ನೀವೇ ತಿನ್ನಿ.'

★★★

ಮಕ್ಕಳ ಶಾಲೆ ಆರಂಭವಾಗಿ ಕೆಲವೇ ದಿನಗಳು ಕಳೆದಿದ್ದವು. ಊರಿನಿಂದ ಬೆಂಗಳೂರಿಗೆ ಬಂದು ಹದಿನೈದು ದಿನಗಳೂ ಆಗಿರಲಿಲ್ಲ. ಅಷ್ಟರಲ್ಲಿ ರೋಹಿಣಿಯ ತಾಯಿಯಿಂದ ಫೋನ್ ಕರೆ ಬಂದಿತ್ತು. 'ತಂದೆಗೆ ಸಖತ್ ಹುಶಾರಿಲ್ಲ. ತಕ್ಷಣ ಹೊರಟು ಬಾ.' ಕಂಗಾಲಾದಳು ರೋಹಿಣಿ. ವಿವರಗಳನ್ನು ಕೇಳಿದಳು. ತಾಯಿ ಹೇಳಿದರು.

'ಬೆಳಿಗ್ಗೆ ಕಾಫಿ ಕುಡಿದು ಪೇಪರೋದುತ್ತಾ ಕುಳಿತಿದ್ದರು. ಆಮೇಲೆ ಸ್ನಾನಕ್ಕೆ ಹೋಗೋಣ ಎನ್ನುತ್ತಾ ಎದ್ದು ನಿಂತರು. ಇದ್ದಕ್ಕಿದ್ದ ಹಾಗೇ ಸಹಿಸಲಾಗದ ಎದೆನೋವು ಅಂತ ನರಳ್ತಾ ಕುಸಿದು ಬಿಟ್ರು. ನನಗೆ ಏನೂ ತಿಳೀದೇ ಗಾಬರಿ ಆಗಿ ಪಕ್ಕದ ಮನೆಯವರನ್ನು ಕರೆದೆ. ಅವರೇ ಡಾಕ್ಟರನ್ನು ಕರೆದುಕೊಂಡು ಬಂದರು. ಹಾರ್ಟ್ ಅಟ್ಯಾಕ್ ಅಂತೆ. ಇನ್ನೂ ಮಲಗಿಯೇ ಇದ್ದಾರೆ. ಗೀತಂಗೂ, ಲತಾ, ವೀಣಾರಿಗೂ ಹೇಳಿದೀನಿ. ತಕ್ಷಣ ಹೊರಡ್ತೀವಿ ಅಂದಿದಾರೆ. ನೀನು ಬೇಗ ಬಂದು ಬಿಡು.'

ರೋಹಿಣಿಯ ಕಣ್ಣುಗಳಲ್ಲಿ ಆಗಲೇ ನೀರು ತುಂಬಿಕೊಳ್ಳುತ್ತಿತ್ತು. ಅಕ್ಕಂದಿರು ಮೈಸೂರಿನಿಂದ ಕಾರುಗಳಲ್ಲಿ ಈಗಾಗಲೇ ಹೊರಟಿರುತ್ತಾರೆ. ಗೀತಾ ಇಲ್ಲೇ ಬೆಂಗಳೂರಿನವಳು, ಅವಳ ಬಳಿಯೂ ಕಾರಿದೆ. ಇಷ್ಟು ಹೊತ್ತಿಗೆ ಹೊರಟಿರಬಹುದು. ತಾನು ಹೊರಡುವುದು ಇನ್ನೆಷ್ಟು ಹೊತ್ತಿಗೋ! ಶ್ರೀನಿವಾಸ ಬರುವುದೇ ಮಧ್ಯಾಹ್ನ ಒಂದೂವರೆಗೆ. ಆಮೇಲೆ ಆತನಿಗೆ ರಜೆ ಸಿಕ್ಕಿ ಸಂಜೆಯ ಬಸ್ಸು ಹತ್ತಿದರೂ ರಾತ್ರಿ ಹನ್ನೊಂದರ ನಂತರವೇ ತಲುಪಲು ಸಾಧ್ಯ. ಅಷ್ಟರಲ್ಲಿ ಅಪ್ಪನಿಗೆ ಏನಾದರೂ... ಬಿಕ್ಕಿದಳು ರೋಹಿಣಿ.

ಶ್ರೀನಿವಾಸ ಮಧ್ಯಾಹ್ನ ಮನೆಗೆ ಬಂದಾಗ ರೋಹಿಣಿ ಮಂಚದ ಮೇಲೆ ಮಲಗಿ ಅಳುತ್ತಿದ್ದಳು. ಬೆಳಿಗ್ಗೆ ತಿಂಡಿಯನ್ನೂ ತಿನ್ನದೆ ಹಾಗೆಯೇ ಕುಳಿತಿದ್ದಳು. ಶ್ರೀನಿವಾಸನಿಗೆ ಗಾಬರಿಯಾಯಿತು. ಕಾರಣ ಕೇಳಿದ ಆತನಿಗೆ ಅಳುತ್ತಲೇ ರೋಹಿಣಿ ಎಲ್ಲವನ್ನೂ ವಿವರಿಸಿದ್ದಳು. ಶ್ರೀನಿವಾಸ ಗಂಭೀರನಾದ.

'ರೋಹಿಣಿ ಅಳು ನಿಲ್ಲಿಸು. ಒಂದು ವಾರಕ್ಕೆ ಬಟ್ಟೆ ಪ್ಯಾಕ್ ಮಾಡು, ಹೋಗೋಣವಂತೆ.'

ಅವನು ಬೀದಿ ಬಾಗಿಲನ್ನು ಹಾಕಿಕೊಂಡು ಹೊರಗೆ ಹೋದಾಗಲೇ ರೋಹಿಣಿಗೆ ನೆನಪಾದದ್ದು, ಅಡಿಗೆಯನ್ನೇ ಮಾಡಿಲ್ಲ ಎಂದು. ಹಾಗೆಯೇ ಹೋದರಲ್ಲ ಎಂದುಕೊಂಡರೂ ಆ